(Sri V. R. NAIDU.)

girl students of the northern extension is under their contemplation ;

(*b*) if so, when they will do it ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂನಲ್ಲಿ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುವ ಆಲೋಚನೆಯುಂಟೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರದಲ್ಲೇ ಸಾಧ್ಯವಿಲ್ಲವೆಂದು ಹೇಳಿದ್ದೇವೆ ; ಸ್ಪಷ್ಟವಾಗಿದೆ.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂ ಬಡಾವಣೆಯಲ್ಲಿ ಸ್ಕೂಲಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೆಚ್ಚಿಗೆ ಇರುವುದರಿಂದ ಕೂಡಲೆ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾರ್ವಜನಿಕರು ಸಹಾಯ ಮಾಡಲು ಮುಂದೆ ಬಂದರೆ ಯೂನಿವರ್ಸಿಟಿಯವರೂ ಆ ಬಗ್ಗೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಸಾರ್ವಜನಿಕರು ಯಾರೂ ಇನ್ನೂ ಮುಂದೆ ಬಂದಿಲ್ಲ. ಪ್ರಶ್ನೆ ಮಾತ್ರ ಕೇಳುತ್ತಲೇ ಇದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ಸಾರ್ವಜನಿಕರು ತಮ್ಮ ಮುಂದೆ ನಿಯೋಗ ಬಂದ ಮೇಲೆ ಕೈಹಾಕುವುದು ಮಾಡಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಯೋಗ ಬರುವುದಲ್ಲ ; ಸಾರ್ವಜನಿಕರು ಯಾವ ರೀತಿ ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾರೋ ಅದನ್ನು ನೋಡಿಕೊಂಡು ಸರ್ಕಾರದವರೂ ಸಹಾಯ ಮಾಡುವುದಕ್ಕೆ ನಿರ್ಧಾರ ಮಾಡುತ್ತಾರೆ.

Depressed Class Lecturers in University.

Q.—269. Sri G. DUGGAPPA (Holalkere—Scheduled Castes).—

Will the Government be pleased to State :—

(*a*) the total number of Lecturers in the University ?

(*b*) the number of Depressed Class Lecturers in the University ?

A.—Sri A. G. RAMACHANDRA RAO (Minister for Law and Education).—

(*a*) 557.

(*b*) Twelve.

ಶ್ರೀ ಜಿ. ದುಗ್ಗಪ್ಪ.—557 ಜನ ಲೆಕ್ಚರರುಗಳಿದ್ದಾರೆಂದು ಹೇಳಿದ್ದೀರಿ. ಇವರನ್ನೆಲ್ಲಾ ನೇರವಾಗಿ ನೇಮಕ ಮಾಡಿಕೊಂಡಿದ್ದೀರಾ ?

Sri A. G. RAMACHANDRA RAO.—Yes, through the Public Service Commission.

ಶ್ರೀ ಜಿ. ದುಗ್ಗಪ್ಪ.—ಈ ರೀತಿಯಾಗಿ ನೇರವಾಗಿ ನೇಮಕ ಮಾಡಿಕೊಳ್ಳುವಾಗ ಹಿಂದುಳಿದ ತರಗತಿಗಳವರಿಗೆ 16⅔ ಭಾಗವನ್ನು ಮೀಸಲಾಗಿಡಬೇಕೆಂಬ ನಿಯಮವನ್ನು ಪಬ್ಲಿಸಿದ್ಯಾನಿಲಯದವರಿಗೆ ತಿಳಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಬಂಧನೆಗಳು ಆದ ತಕ್ಷಣ ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಿಂದೀಚೆಗೆ ಆ ರೂಲ್ ಪ್ರಕಾರ ಎಷ್ಟು ಜನ ಹಿಂದುಳಿದ ಪಂಗಡದವರನ್ನು ವಿಶ್ವವಿದ್ಯಾನಿಲಯದಲ್ಲಿ ನೇಮಿಸಿಕೊಳ್ಳಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.—ಹೋದ ವರುಷ ಜುಲೈ ತಿಂಗಳಿನಲ್ಲಿ ಜಿಯಾಲಜಿ ಭಾಗಕ್ಕೆ 3 ಜನ ಲೆಕ್ಚರರುಗಳನ್ನು ತೆಗೆದುಕೊಂಡಿದ್ದೀರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಇವೆಲ್ಲಾ ಸಪ್ಲಿಮೆಂಟರಿಯಾಗಿ ಉದ್ಭವಿಸುವ ಪ್ರಶ್ನೆಗಳಾಗಿರುವುದರಿಂದ ರಿಕಾರ್ಡ್‌ಗಳನ್ನು ಸರಿಯಾಗಿ ನೋಡಿ ಜವಾಬು ಕೊಡಕೂಡದೇ ?

ಅಧ್ಯಕ್ಷರು.—ನೇರವಾದ ಪ್ರಶ್ನೆಯಾದರೆ ಉತ್ತರ ಹೇಳುತ್ತಾರೆ. ಇಲ್ಲದಿದ್ದರೆ ನೋಟೀಸ್ ಕೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಸರ್ಕಾರಿ ಹುಕುಮನ್ನು ಅವರು ಅಕ್ಷರಶಃ ಪಾಲಿಸಿದ್ದಾರೆಯೇ ಇಲ್ಲವೇ ಎಂದು ರಿಪೋರ್ಟ್ ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ರೋಪವಾಗಿರುವುದೇನೂ ಕಂಡು ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—16⅔%ಗೆ ಕಡಮೆಯಿಲ್ಲದಂತೆ ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರಿ ಹುಕುಂ ಇದೆ. ಹಾಗಿರುವಾಗ, 49 ಜನರ ಪೈಕಿ ಒಬ್ಬರನ್ನು ಮಾತ್ರ ತೆಗೆದುಕೊಂಡಿದ್ದರೆ ಸರಿಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿಯಾದ ಅರ್ಹತೆಯುಳ್ಳವರು ಬಂದಿದ್ದರೆ ಕೊಡುತ್ತಿದ್ದರು.

ಶ್ರೀ ಕೆ. ಪ್ರಭಾಕರ್.—ಸರಿಯಾದ ಅರ್ಹತೆಯುಳ್ಳವರು ಬಂದರೂ ಯಾವುದೋ ನೆಪದ ಮೇಲೆ ತಳ್ಳಿಹಾಕುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—16⅔ ಭಾಗ ಕೊಡಬೇಕು ಎನ್ನುವುದರಲ್ಲಿ, ಇಲ್ಲಿಯ ವರೆಗೂ ಅಲ್ಲರ ತಕ್ಕ ಒಟ್ಟು ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ, ಅಥವಾ ಹುಕುಂ ಆದ ಮೇಲೆ ಉಂಟಾದ ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹುಕುಂ ಆದ ಮೇಲೆ fill ಮಾಡಬೇಕಾಗಿ ಬಂದಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

Professors and Assistant Professors in the University.

Q.—322. Sri K. PUTTASWAMY (Sreerangapatna).—

Will the Government be pleased to state :—